ಅವೆಲ್ಲದರ ಬಗ್ಗೆ ಕೂಡ ರಸ್ತೆ ಆಗಿರಬಹುದು, ಪಾರ್ಕಿಂಗ್ ಆಗಿರಬಹುದು, ವಿದ್ಯುತ್ ದೀಪಗಳನ್ನು ಅಳವಡಿಸುವಂತಹ ಒಂದು ವಿಷಯವಾಗಿರಬಹುದು, ಈ ಎಲ್ಲಾ ವಿಚಾರಗಳನ್ನು ಕೂಡ ರೂ.55 ಲಕ್ಷದಲ್ಲಿ ಅನುಮೋದನೆ ಕೊಟ್ಟಿದ್ದೇವೆ. ಈ ಕೆಲಸ ಅತೀ ಶೀಘ್ರದಲ್ಲಿ ಕೆಲವೇ ದಿವಸಗಳಲ್ಲಿ ಪ್ರಾರಂಭವಾಗುತ್ತದೆ.

ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕುರಿತು

95(675) ಶ್ರೀ ರಹೀಂ ಖಾನ್ (ಬೀದರ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ಛತ್ರಪತಿ ಶಿವಾಜಿ ಮಹಾರಾಜರವರ ಜಯಂತಿಯು ದೇಶದ ಎಲ್ಲಾ ಕಡೆ ವಿಜೃಂಬಣೆಯಿಂದ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಜಯಂತಿಯಂದು ಸರ್ಕಾರವು ಸಾರ್ವಜನಿಕ ರಜಾ ಘೋಷಣೆ ಮಾಡುವ ತೀರ್ಮಾನ ಕೈಗೊಂಡಿದೆಯೇ;

ಇ) ಹಾಗಿದ್ದಲ್ಲಿ, ಯಾವ ವರ್ಷದಿಂದ ರಜಾ ಘೋಷಣೆ ಮಾಡಲಾಗುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿ)

ಅ) ಹೌದು.

ಆ) ರಜಾ ಘೋಷಣೆ ಮಾಡುವ ಬಗ್ಗೆ ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಂಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ರಹೀಂ ಖಾನ್: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಶ್ರೀ ಛತ್ರಪತಿ ಶಿವಾಜಿ ಮಹಾರಾಜರವರ ಬಗ್ಗೆ ಇದೆ. ನಾನು ಈ ಮೊದಲು ಈ ಪ್ರಶ್ನೆ ಕೇಳಿದ್ದೇನೆ. ಪ್ರಶ್ನೆ ಸಂಖ್ಯೆ 'ಅ'ಗೆ ಸಂಬಂಧಿಸಿದಂತೆ ನಮ್ಮ ದೇಶದಲ್ಲಿ ಶಿವಾಜಿ ಮಹಾರಾಜರವರ ಜಯಂತಿ ದೇಶದ ಎಲ್ಲಾ ಕಡೆ ವಿಜೃಂಭಣೆಯಿಂದ ನಡೆಯುತ್ತಿರುವುದು ಅವರಿಗೆ ಗೊತ್ತಿದೆ ಎಂದು ಹೇಳಿದ್ದಾರೆ. ಪ್ರಶ್ನೆ ಸಂಖ್ಯೆ 'ಆ'ನಲ್ಲಿ ಏನು ಹೇಳಿದ್ದಾರೆ ಎಂದರೆ, last time CM ರವರು ನಮ್ಮ ಬೀದರ್

ಕ್ಷೇತ್ರಕ್ಕೆ ಬಂದಿದ್ದರು. ಆ ಸಮಯದಲ್ಲಿ ಎಲ್ಲಾ ಮರಾಠ ಸಮಾಜ ಮತ್ತು ಬೇರೆ ಬೇರೆ ಸಮಾಜದವರು ಅವರಿಗೆ officially holiday declare ಮಾಡಬೇಕೆಂದು ಕೇಳಿದ್ದರು. ಏಕೆಂದರೆ ಬೆಳಗಾಂ ಆಗಲಿ, ಬಿಜಾಪುರ ಆಗಲಿ, ಗುಲ್ಬರ್ಗ ಆಗಲಿ, ಬೀದರ್‌ನಲ್ಲಿ ಬಾಲ್ಕಿ ಮತ್ತು ಔರಾದ್‌ಗಳಲ್ಲಿ ಮರಾಠ domination ಇದೆ. ಆದರೂ ಸಹ ಅವರಿಗೆ ಬೇರೆ ಎಲ್ಲಾ ಸಮಾಜದವರು ತುಂಬಾ respect ಕೊಡುತ್ತಾರೆ. ಪಕ್ಕದಲ್ಲೇ ಮಹಾರಾಷ್ಟ್ರ ಸ್ಟೇಟ್‌ನಲ್ಲಿ ನಮ್ಮ ಬಸವೇಶ್ವರ ಜಯಂತಿಗೆ Government holiday declare ಮಾಡಿದ್ದಾರೆ. ಅದರ ಸಲುವಾಗಿ ನಾನು last time also ಮಾನ್ಯ ಮುಖ್ಯಮಂತ್ರಿಗಳಿಗೆ officially holiday declare ಮಾಡಬೇಕೆಂದು request ಮಾಡಿಕೊಂಡಿದ್ದೆ. ಈ ಸಲ ನಮ್ಮ ಪ್ರಶ್ನೆಗೆ ಉತ್ತರ ಏನು ಹೇಳಿದ್ದಾರೆ ಎಂದರೆ ನಾವು ಇನ್ನೂ decide ಮಾಡಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅದನ್ನು decide ಮಾಡಬೇಕೆಂದು ನಾನು request ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ same questionಬಗ್ಗೆ ಮಾನ್ಯ ಈಶ್ವರ ಖಂಡ್ರೆಯವರದು ಕೂಡ ಇದೆ. ಮಾತನಾಡುತ್ತಾರೆ.

ಅಧ್ಯಕ್ಷರು: ಉತ್ತರ ಹೇಳಿ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಸಾಕಷ್ಟು ರಜೆಗಳಿವೆ. ಹೀಗೆ ಮಾಡುತ್ತಾ ಹೋದರೆ ನನಗನಿಸುತ್ತದೆ ಇಡೀ ವರ್ಷ ರಜೆ ಆಗಿ, ಯಾವತ್ತು working day ಎಂದು ನಾವು ಕ್ಯಾಲೆಂಡರ್‌ನಲ್ಲಿ ಹಾಕಬೇಕಾಗುತ್ತದೆ. ಒಂದು ವರ್ಷದಲ್ಲಿ 23 ದಿವಸ ರಜೆ ಎಂದು ನಾವು ಈಗಾಗಲೇ ಘೋಷಿಸಿದ್ದೇವೆ. ನನಗನಿಸುವುದು ಏನೆಂದರೆ, ಶಿವಾಜಿ ಮಹಾರಾಜರಿಗೆ ನಾವು ಗೌರವ ತೋರಿಸಬೇಕೆಂದರೆ, ರಜೆ ಅಗತ್ಯವಲ್ಲ. ಬೇರೆ ರೀತಿ ಅಗತ್ಯವಿದೆ. ಬೇಕಾದರೆ ಯಾವುದಾದರೂ ಕಾರ್ಯಕ್ರಮ ಮಾಡೋಣ. ಇನ್ನೂ ಹೆಚ್ಚಿನ ಕೆಲಸ ಮಾಡಿ ಶಿವಾಜಿ ಮಹಾರಾಜರಿಗೆ ಗೌರವ ಅರ್ಪಿಸೋಣ ಎಂಬುದು ನನ್ನ, ಸರ್ಕಾರದ ನಂಬಿಕೆ. ದಯವಿಟ್ಟು, ರಜೆ ಘೋಷಿಸುವ ಪ್ರಸಂಗ ನಮ್ಮ ಮುಂದೆ ಇಲ್ಲ.

ಅಧ್ಯಕ್ಷರು: ಆಯಿತು. ಎಂ.ಟಿ.ಕೃಷ್ಣಪ್ಪನವರು.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ರಜೆಗಳು ಜಾಸ್ತಿಯಾಗಿದೆ. ರಜೆ ಕೊಡುವುದು ಬೇಡ ಎಂಬುದನ್ನು ನಾನು ಒಪ್ಪುತ್ತೇನೆ. ಕಾರ್ಪೊರೇಷನ್ಸ್‌ಗೆ second Saturday ರಜೆ ಇಲ್ಲ. ಸರ್ಕಾರಕ್ಕೆ ಮಾತ್ರ ರಜೆ ಇದೆ. ಅದು ಏಕೆ? ಅದನ್ನೂ ವಜಾ ಮಾಡಿ.

ಶ್ರೀ ಎಸ್. ಸುರೇಶ್ ಕುಮಾರ್: ಸರ್ಕಾರಕ್ಕೆ ರಜೆಯನ್ನು ವಜಾ ಮಾಡಿ ಎನ್ನುತ್ತೀರೋ? ಕಾರ್ಪೊರೇಷನ್‌ಗೆ ವಜಾ ಮಾಡಿ ಎನ್ನುತ್ತೀರೋ?

ಶ್ರೀ ಟಿ.ಬಿ. ಜಯಚಂದ್ರ: ಅಲ್ಲ. Second Saturdayಗೆ ರಜೆ ಕೊಡುವುದು ಬೇಡ. Working day ಮಾಡಿ ಎಂದು ಹೇಳುತ್ತಿರುವುದು.

ಶ್ರೀ ಎಸ್. ಸುರೇಶ್ ಕುಮಾರ್: ಪರಿಶೀಲಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ದಯಮಾಡಿ ಮಾಡಿ.

ತುರುವೇಕೆರೆ ಪಟ್ಟಣದಲ್ಲಿ ಸಬ್‌ಟಿಕ್ ಟ್ಯಾಂಕ್ ನಿರ್ಮಿಸುವುದು

96(463) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ಪಟ್ಟಣದಲ್ಲಿ ಒಳಚರಂಡಿ ಮಂಜೂರಾಗಿದ್ದು, ಸಬ್‌ಟಿಕ್ ಟ್ಯಾಂಕ್ ನಿರ್ಮಿಸಲು ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಟ್ಯಾಂಕ್ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು)